ದಿನಾಂಕಃ**16.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.

ಮುಖ್ಯವಿಚಾರಣೆಃ ಶ್ರೀ. ಬಿ ವೈ ಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸಂತ್ಯಾಂಶಗಳಿಂದ ಕೂಡಿರುತ್ತದೆ.

ಶುಶಾಂತ್ ಲಾಮ ಎನ್ನುವ ರೋಗಿಗೆ ಸಂಬಂದಪಟ್ಟಂತೆ ಒಂದು ಹೊರರೋಗಿ ವೈದ್ಯಕೀಯ ಪರೀಕ್ಷಾ ವರದಿಯನ್ನು ಹಾಗೂ ಒಂದು ಕ್ಷ-ಕಿರಣವನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ನಿಪಿಃ13 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಶ್ರೀ.ಎ. ಎ. ಎದುರುದಾರರ ಪರ ವಕೀಲರಿಂದ

ನಾನು ಅರ್ಜಿದಾರರಿಗೆ ವೈಯಕ್ತಿಕವಾಗಿ ಚಿಕಿತ್ಸೆ ಕೊಟ್ಟಿರುದಿಲ್ಲ. ನಾನು ಕೇವಲ ನ್ಯೂನತೆ ಪ್ರಮಾಣ ನಿರ್ದರಿಸುವ ಸಲುವಾಗಿ ಅರ್ಜಿದಾರರನ್ನು ಒಂದೇ ಬಾರಿ ಪರೀಕ್ಷೆ ಮಾಡಿರುತ್ತೇನೆ. ಅರ್ಜಿದಾರನ ವೃತ್ತಿ ಬಗ್ಗೆ ನನಗೆ ಗೊತ್ತಿಲ್ಲ. ಇತ್ತಿಚಿನ ಕ್ಷ-ವರದಿ ಪ್ರಕಾರ ಮೂಳೆಗಳು ವಕ್ರವಾಗಿ ಕೂಡಿದ್ದು, ಒಳಜೋಡಣೆ ಪರಿಣಾಮಕಾರಿಯಾಗಿಲ್ಲ. ಸಾಮಾನ್ಯವಾಗಿ ಅರ್ಜಿದಾರನಾಗಿ ಆಗಿರುವ ಮೂಳೆ ಮುರಿತ ಸಾಮಾನ್ಯವಾಗಿ 2 ತಿಂಗಳಲ್ಲಿ ವಾಸಿಯಾಗುತ್ತದೆ ಎಂದರೆ ಸರಿ. ನಾನು ನ್ಯೂನತೆ ಪ್ರಮಾಣ ಪತ್ರ ಕೊಡುವ ಒಂದೂವರೆ ವರ್ಷದ ಮುಂಚೆ ಮೂಳೆ ಮುರಿತ ಆಗಿತ್ತು ಎಂದರೆ ಸರಿ. ಡಿಸ್ ಚಾರ್ಜ ಸಮರಿ ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿ ನೋಡಿಲ್ಲ ಎಂದರೆ ಸರಿ. ಮೂಳೆ ಜೋಡಣೆ ಸರಿಯಾಗಿ ಆಗದೆ ಇರುವ ಕಾರಣ ಅರ್ಜಿದಾರ ಬೇರೆ ಚಿಕಿತ್ಸೆ ಪಡೆಯಬಹುದಾಗಿತ್ತು ಎಂದರೆ ಸರಿ. ನಾನು ನೀಡಿದ ನ್ಯೂನತೆ ಅರ್ಜಿದಾರನ ನಿರ್ಲಕ್ಷ್ಯತನದ ಕಾರಣ ಉಂಟಾದ ನ್ಯೂನತೆ ಎಂದರೆ ಸರಿಯಲ್ಲ. ಮುಂದುವರೆದ ಶಸ್ತ್ರ ಚಿಕಿತ್ಸೆಗೆ ಸಲಹೆ ನೀಡಿದ್ದೇನೆ. ಶಸ್ತ್ರ ಚಿಕಿತ್ಸೆಯ ನಂತರ ನ್ಯೂನತೆ ಕಡಿಮೆಯಾಗಬಹುದು ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದಲ್ಲಿ ಹೇಳಿಕೊಂಡಿರುವಂತೆ ಯಾವುದೇ ತೊಂದರೆಗಳು ಇರುವುದಿಲ್ಲ ಹಾಗೂ ನಾನು ಹೇಳಿದಷ್ಟು

ಅರ್ಜಿದಾರರಿಗೆ ನ್ಯೂನತೆ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ದೈನಂದಿನ ಕೆಲಸಕಾರ್ಯ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ಯಾರಾ 5 ಮತ್ತು 6 ರಲ್ಲಿ ಹೇಳಿರುವ ಯಾವುದೇ ತೊಂದರೆಗಳು ಇಲ್ಲ ಎಂದರೆ ಸರಿಯಲ್ಲ. ಮುಂದಿನ ಶಸ್ತ್ರ ಚಿಕಿತ್ಸೆಗೆ ಖರ್ಚು ವೆಚ್ಚದ ಪಟ್ಟಿ ನೀಡಿಲ್ಲ. ನಾನು ಹೆಚ್ಚಿನ ನ್ಯೂನತೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

**15** ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ, ಬೆಂಗಳೂರು.